ಇಲಾಖೆ / ವಿಷಯ : DEPARTMENT / SUBJECT: ಹಣಕಾಸು

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ

ದಿನಾಂಕ : DATE 19/02/2020

## ಬಜೆಟ್: ಕೇಂದ್ರದ ತೆರಿಗೆ ಆದಾಯದಲ್ಲಿ ರಾಜ್ಯದ ಪಾಲು ಕಡಿತ


# ರಾಜ್ಯಕ್ಕೆ ₹5,102 ಕೋಟಿ ಖೋತಾ

ಪ್ರ. ವಾ. 19-2-20


ಕೇಂದ್ರ ಸರ್ಕಾರವು ತನ್ನ ತೆರಿಗೆ ವರಮಾನವನ್ನು ರಾಜ್ಯಗಳಿಗೆ ಹಂಚಿಕೆ ಮಾಡುವ ನಿಯಮಗಳಲ್ಲಿ ಬದಲಾವಣೆ ಮಾಡಿದೆ. ಹಾಗಾಗಿ, ಕೇಂದ್ರದಿಂದ ರಾಜ್ಯಗಳಿಗೆ ಬರಬೇಕಿರುವ ತೆರಿಗೆ ಪಾಲಿನಲ್ಲಿ ಭಾರಿ ಕಡಿತವಾಗಿದೆ. 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿರುವ ನೂತನ ನಿಯಮಾವಳಿಗಳ ಪ್ರಕಾರವೇ 2020-21ನೇ ಸಾಲಿನಲ್ಲಿ ತೆರಿಗೆ ಪಾಲನ್ನು ಹಂಚಿಕೆ ಮಾಡಲಾಗಿದೆ. ಇದರಿಂದ, ಕೇಂದ್ರದ ತೆರಿಗೆ ಆದಾಯದಲ್ಲಿ ಬರಬೇಕಿದ್ದ ಪಾಲಿನಲ್ಲಿ ಕರ್ನಾಟಕಕ್ಕೆ ₹ 5,102 ಕೋಟಿ ಕಡಿತ ಆಗಬಹುದು

## ಕರ್ನಾಟಕಕ್ಕೆ ಕತ್ತರಿ, ಉತ್ತರದ ರಾಜ್ಯಗಳಿಗೆ ಏರಿಕೆ

ಕೇಂದ್ರ ಸರ್ಕಾರದ ತೆರಿಗೆ ವರಮಾನದಲ್ಲಿ ಕರ್ನಾಟಕದ ಪಾಲನ್ನು ಕಡಿಮೆ ಮಾಡಲಾಗಿದೆ. ಆದರೆ, ಉತ್ತರ ಪ್ರದೇಶ ಮತ್ತು ಬಿಹಾರದ ಪಾಲನ್ನು ಏರಿಕೆ ಮಾಡಲಾಗಿದೆ.




## ರಾಜ್ಯದ ಪಾಲಿನಲ್ಲಿ ಕಡಿತ




- ಕೇಂದ್ರ ತೆರಿಗೆ ಮತ್ತು ಸುಂಕದ ವರಮಾನದಲ್ಲಿ ರಾಜ್ಯಗಳ ಪಾಲನ್ನು ಹಂಚಿಕೆ ಮಾಡುವ ನಿಯಮಗಳಲ್ಲಿ ಮಾರ್ಪಾಡು ಮಾಡಲಾಗಿದೆ. ಈ ಪ್ರಕಾರ, ರಕ್ಷಣೆ ಮತ್ತು ಆಂತರಿಕ ಭದ್ರತೆಗೆ ಪ್ರತ್ಯೇಕ ಅನುದಾನವನ್ನು ತೆಗೆದಿರಿಸಲು ಅವಕಾಶವಿದೆ. ರಾಜ್ಯಗಳ ಆಂತರಿಕ ಭದ್ರತೆಗೆ ತೆಗೆದಿರಿಸುವ ಅನುದಾನ ಕಡಿತವಾಗಲಿದೆ. ಕೇಂದ್ರ ಸರ್ಕಾರದ ಬಳಿ ಹೆಚ್ಚಿನ ಹಣ ಉಳಿಯಲಿದೆ. ಈ ಹಣವನ್ನು ವೆಚ್ಚ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರಲಿದೆ. ರಾಜ್ಯ ಸರ್ಕಾರಗಳು ಕೇಂದ್ರದ ತೆರಿಗೆ ಪಾಲಿನಲ್ಲಿ ಕಡಿತ ಎದುರಿಸಬೇಕಾಗುತ್ತದೆ
- ಹೊಸ ನಿಯಮಗಳ ಪ್ರಕಾರ, ಕೆಲವಾರು ಅನುದಾನವನ್ನು ರಾಜ್ಯವಾರು ವಿಂಗಡಣೆ ಮಾಡದೇ ಇರಲು ಅವಕಾಶವಿದೆ. ಈ ಹಣವೂ ಕೇಂದ್ರ ಸರ್ಕಾರದ ಬಳಿ ಉಳಿಯಲಿದೆ. ಈ ಅನುದಾನವನ್ನು ವಲಯವಾರು ಹಂಚಿಕೆ ಮಾಡಲು ಕೇಂದ್ರಕ್ಕೆ ಅಧಿಕಾರವಿದೆ. ಈ ಭಾರಿ ಬಜೆಟ್‌ನಲ್ಲಿ ಇದನ್ನು ಅನುಸರಿಸಲಾಗಿದೆ. ಹೀಗಾಗಿ ಕರ್ನಾಟಕಕ್ಕೆ ಈ ಬಜೆಟ್‌ನಲ್ಲಿ, ಹಿಂದಿನ ಬಜೆಟ್‌ಗಿಂತಲೂ ಕಡಿಮೆ ಅನುದಾನ ದೊರೆತಿದೆ

ಆಧಾರ: 15ನೇ ಹಣಕಾಸು ಆಯೋಗದ ವರದಿ, 2020-21ನೇ ಸಾಲಿನ ಬಜೆಟ್, 2019-20ನೇ ಸಾಲಿನ ಬಜೆಟ್